ಆ) ಉದ್ಭವಿಸುವುದಿಲ್ಲ.

ಇ) ಇಲ್ಲ.

ವಿಷಯ : ಬಸವ ಕಲ್ಯಾಣದಿಂದ ಪವಿತ್ರ ಸ್ಥಳಗಳಿಗೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್‌ಗಳನ್ನು ಓಡಾಡಿಸುವ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 452 (243)

ಶ್ರೀ. ಬಸವರಾಜ ಪಾಟೀಲ್ ಅಟ್ಟೂರ್ (ಬಸವ ಕಲ್ಯಾಣ) :- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವ ಕಲ್ಯಾಣದಿಂದ ಇತರೆ ಯಾತ್ರಾ ಸ್ಥಳಗಳಾದ ಶ್ರೀ.ಶೈಲ, ಉಡುಪಿ, ತುಳಜಾಪುರ ತಿರುಪತಿ, ಧರ್ಮಸ್ಥಳ, ಮುಂಬಯಿಗಳಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳನ್ನು ಓಡಿಸುವ ಬಗ್ಗೆ ಪ್ರಸ್ತಾವನೆಗಳಿರುತ್ತವೆಯೇ

ಆ) ಹಾಗಿಲ್ಲದಿದ್ದಲ್ಲಿ ಬಸವ ಕಲ್ಯಾಣದಿಂದ ಮೇಲಿನ ಸ್ಥಳಗಳಿಗೆ ಬಸ್ಸುಗಳನ್ನು ತರಿಸಲು ಸರ್ಕಾರಿ ಕ್ರಮ ತೆಗೆದುಕೊಳ್ಳುವುದೇ.

ಇ) ಮೇಲಿನ ಸ್ಥಳಗಳಿಗೆ ವಾಹನ ಸೌಕರ್ಯ ಕಲ್ಪಿಸಬೇಕೆಂದು ಬಸವ ಕಲ್ಯಾಣದ ಜನತೆ ಕೋರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ. ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :-

ಅ) ಇಲ್ಲ

ಆ) ಇಲ್ಲ . ಆದರೆ ಧರ್ಮಸ್ಥಳ ಮತ್ತು ಉಡುಪಿಗಳನ್ನು ಹೊರತು ಪಡಿಸಿ ಈ ಮಾರ್ಗಗಳನ್ನು ಆಂಧ್ರ ಪ್ರದೇಶ ಮತ್ತು ಮಹಾರಾಷ್ಟ್ರಗಳೊಂದಿಗೆ ಮುಂದಿನ ಅಂತರ ರಾಜ್ಯ ಒಪ್ಪಂದದಲ್ಲಿ ಸೇರಿಸುವ ಬಗ್ಗೆ ಪರಿಶೀಲಿಸಲಾಗುವುದು.

ಇ) ಹೌದು.

ವಿಷಯ : ಬಸವ ಕಲ್ಯಾಣದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಕಾರ್ಯ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 453 (242)

ಶ್ರೀ. ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ) :- ಮಾನ್ಯ ಪ್ರವಾಸೋದ್ಯಮ ಹಾಗೂ ಯುವಜನ ಸೇವಾ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬಸವಕಲ್ಯಾಣದಲ್ಲಿ 1994-95ನೇ ಸಾಲಿನಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಕಾರ್ಯಗಳನ್ನು ಸರ್ಕಾರ ಕೈಗೊಂಡಿದೆಯೇ ?

ಆ) ಹಾಗಿದ್ದರೆ ಅವುಗಳ ವಿವರಗಳನ್ನು ಒದಗಿಸುವುದು

ಇ) ಬಸವಕಲ್ಯಾಣದ ಅಭಿವೃದ್ಧಿಗೆ ನಿಗಧಿಪಡಿಸಿರುವ ಮೊತ್ತ ;

ಈ) ಬಸವಕಲ್ಯಾಣದಲ್ಲಿ ಪ್ರವಾಸೋದ್ಯಮ ಅಭ್ಯಿದ್ದಿಗಾಗಿ 1994-95ನೇ ಸಾಲಿನಲ್ಲಿ ಸರ್ಕಾರ ಪ್ರವಾಸೋದ್ಯಮ ಅಭಿವೃದ್ದಿ ಕಾರ್ಯಗಳಿಗಾಗಿ ಭಾರತ ಸರ್ಕಾರದ ನೆರವನ್ನು ಕೋರಿದೆಯೇ?

ಉ) ಬಸವಕಲ್ಯಾಣಕ್ಕೆ ಯಾಂತ್ರಿಕ ನಿವಾಸವನ್ನು ಭಾರತ ಸರ್ಕಾರ ಮಂಜೂರು ಮಾಡಿದೆ ಎಂಬುದು ನಿಜವೆ ?

ಊ) ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ. ಓಂಪ್ರಕಾಶ್ ಕಣಗಲಿ (ಪ್ರವಾಸೋದ್ಯಮ ಹಾಗೂ ಯುವ ಜನ ಸೇವಾ ರಾಜ್ಯ ಸಚಿವರು)

ಅ) ಹೌದು

ಆ) 1994-95ನೇ ಸಾಲಿನಲ್ಲಿ ಕೇಂದ್ರ ಪ್ರವಾಸೋದ್ಯಮ ಸಚಿವಾಲಯವು ಬಸವಕಲ್ಯಾಣದ ಈ ಕೆಳಕಂಡ ಯೋಜನೆಗಳನ್ನು ಆದ್ಯತಾ ಪಟ್ಟಿಯಲ್ಲಿ ಸೇರಿಸಿದೆ.

	ಅಂದಾಜು ವೆಚ್ಚ (ಲಕ್ಷ ರೂಗಳಲ್ಲಿ)
1) ಪ್ರವಾಸಿ ಸಂಕೀರ್ಣ	30-00
2) ದೃಶ್ಯ ಮತ್ತು ಶ್ರವಣ ಯೋಜನೆ	40-00

ಇ) ಸರ್ಕಾರವು 1994-95ನೇ ಸಾಲಿನ ಆಯವ್ಯಯದಲ್ಲಿ ಪ್ರವಾಸಿ ಸಂಕೀರ್ಣಕ್ಕಾಗಿ ರೂ 15 ಲಕ್ಷ ಹಾಗೂ ದೃಶ್ಯ ಮತ್ತು ಶ್ರವಣ ಯೋಜನೆಗೆ ರೂ. 40 ಲಕ್ಷಗಳನ್ನು ಒದಗಿಸಿದೆ.

ಈ) ಹೌದು.

ಉ) ಇಲ್ಲ.

ಊ) ಉದ್ಭವಿಸುವುದಿಲ್ಲ.

ವಿಷಯ : ರಾಷ್ಟ್ರೀಯ ಹೆದ್ದಾರಿಗಳಲ್ಲಿ ಆಗುತ್ತಿರುವ ಅಪಘಾತಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 454 (132)

ಶ್ರೀ. ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) :- ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?